**ದಿಃ02.04.19 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ** ಶ್ರೀ ಹೆಚ್.ಯು.ಎನ್. ವಕೀಲರಿಂದಃ

ದಾವಾ ಶೆಡ್ಯೂಲ್ ನಲ್ಲಿ ಕೆಲವು ಆಸ್ತಿಗಳನ್ನು ನಾನು ಸೇರಿಸಿಲ್ಲ ಎಂದರೆ ಅವುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲದ ಕಾರಣ ಸೇರಿಸಿಲ್ಲ. ನಾನು 9 ನೇ ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಉದ್ದೇಶ ಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸುಳ್ಳು. 5 ನೇ ಪ್ರತಿವಾದಿ 1972 ನೇ ಇಸವಿಯಿಂದ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿಯು ತನ್ನ ಮನೆಯ ಪಕ್ಕದಲ್ಲಿರುವ ಗದ್ದೆ ಮತ್ತು ಕಾಫಿ ತೋಟದಲ್ಲಿ 1972 ನೇ ಇಸವಿಯಿಂದ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಆದರೆ ವಿಭಾಗ ಆಗಿರುವುದಿಲ್ಲ. ಯಾವುದೇ ಆಸ್ತಿಗಳು ನಮ್ಮ ನಡುವೆ ವಿಭಾಗ ಆಗಿಲ್ಲ. ನಾನು ಕೆಲವು ಆಸ್ತಿಗಳನ್ನು ಅನುಭವ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ಅನುಭವದಲ್ಲಿರುವ ಆಸ್ತಿಗಳ ಮೇಲೆ ಬ್ಯಾಂಕಿನಿಂದ ಸಾಲ ಪಡೆದಿದ್ದೇನೆ ಎಂದರೆ ಸರಿ. ಅದೇ ರೀತಿ 5 ನೇ ಪ್ರತಿವಾದಿಯು ತನ್ನ ಸ್ವಾಧೀನದಲ್ಲಿರುವ ಆಸ್ತಿಗಳ ಮೇಲೆ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಎಂದರೆ ಸರಿ. ಬ್ಯಾಂಕಿನವರು ಸಾಲ ನೀಡುವಾಗ ಆಸ್ತಿಗಳು ಯಾರ ಸ್ವಾಧೀನದಲ್ಲಿ ಇವೆ ಎಂದು ವಿಚಾರಣೆ ಮಾಡಿ ಸಾಲ ನೀಡುತ್ತಾರೆ ಎಂದರೆ ಸರಿ . ಆದರೆ ಆರ್.ಟಿ.ಸಿಗಳು ಜಂಟಿಯಾಗಿ ಇವೆ.

ಪಾಟೀ ಸವಾಲುಃ ಶ್ರೀ ಸಿ.ಎಂ.ಕೆ. ವಕೀಲರಿಂದಃ

ನಮ್ಮ ಕುಟುಂಬದ ಆಸ್ತಿಗಳಲ್ಲಿ ನಮ್ಮ ತಂದೆಗೆ ಎಷ್ಟು ಆಸ್ತಿ ಬಂದಿವೆ ಎಂದು ನನಗೆ ಗೊತ್ತಿಲ್ಲ. ಐಟಂ ನಂಬರ್ 10 ರ ಸರ್ವೆ ನಂಬರ್ 211/1 ರಲ್ಲಿ 38.20 ಎಕರೆ ಆಸ್ತಿ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ . ಈ ಆಸ್ತಿಯಲ್ಲಿ ನಾನು ಭಾಗ ಕೇಳಿಲ್ಲ. ಕಾರಣ ಸದರಿ ಆಸ್ತಿಯು ಜಮ್ಮಾ ಬಾಣೆ ಆಗಿದೆ. ಈ ಆಸ್ತಿಯಲ್ಲಿ ನಮಗೆ ಹಕ್ಕು ಇದೆ ಎಂದರೆ ಸರಿ. ಕೆಲವು ಆಸ್ತಿಗಳನ್ನು ನಮ್ಮ ತಂದೆ ಖರೀದಿಸಿದ್ದಾರೆ ಎಂದರೆ ಸರಿ. ನಮ್ಮ ತಂದೆಯು ಸರ್ವೆ ನಂಬರ್ 201/2, ಸರ್ವೆ ನಂಬರ್ 202/9 , ಸರ್ವೆ ನಂಬರ್ 192,ಸರ್ವೆ ನಂಬರ್ 193 ,ಸರ್ವೆ ನಂಬರ್ 194, ಸರ್ವೆ ನಂಬರ್ 195/1 , ಸರ್ವೆ ನಂಬರ್ 195/2 , ಸರ್ವೆ ನಂಬರ್ 195/3 , ಸರ್ವೆ ನಂಬರ್ 196, ಸರ್ವೆ ನಂಬರ್ 197, ಸರ್ವೆ ನಂಬರ್ 198 ರಲ್ಲಿ ಖರೀದಿಸಿದ್ದಾರೆ. ಉಳಿದ 2 ಸರ್ವೆ ನಂಬರ್ ಗಳು ನನಗೆ ನೆನಪಿಲ್ಲ. ನಮ್ಮ ತಂದೆ

ಒಂದು ಹಳೆಯ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಆ ಮನೆಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಈಗ ಕಟ್ಟಿರುವ ಮನೆಯ ಸರ್ವೆ ನಂಬರ್ 201/2 ರಲ್ಲಿ ಇದೆ. ಈ ಆಸ್ತಿಯನ್ನು ನಮ್ಮ ತಂದೆಯು ಖರೀದಿಸಿ ಮನೆ ಕಟ್ಟಿದ್ದಾರೆ.

ಈ ಆಸ್ತಿಯಲ್ಲಿ ಪ್ರತಿವಾದಿ 1 ರಿಂದ 7 ರವರು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ. ನಾನು ಮತ್ತು 8 ನೇ ಪ್ರತಿವಾದಿ ಈ ಮನೆಯನ್ನು ಸಮಾನ ಅನುಭವ ಮಾಡುತ್ತಿದ್ದೇವೆ ಎಂದರೆ ಕಳೆದ 8 ವರ್ಷದಿಂದ 8 ನೇ ಪ್ರತಿವಾದಿ ಅನುಭವದಲ್ಲಿ ಇಲ್ಲ. ಅವರ ಭಾಗದ ಮನೆಯು ನನ್ನ ಸ್ವಾಧೀನಕ್ಕೆ ಬಂದಿಲ್ಲ.ಸರ್ವೆ ನಂಬರ್ 201/2 ರ ಕಾಫಿ ತೋಟದಲ್ಲಿ ನಮ್ಮ ಮನೆಯ ನೇರಕ್ಕೆ ಅರ್ಧ ಭಾಗದಲ್ಲಿ ನಾನು, ಉಳಿದ ಅರ್ಧ ಬಾಗದಲ್ಲಿ 8 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ. ಸರ್ವೆ ನಂಬರ್ 201/2 ರ ಪೈಸಾರಿ ಜಾಗದಲ್ಲಿ ನಮ್ಮ ತಂದೆ ಏಲಕ್ಕಿ ಬೆಳೆಯುತಿತದ್ದರು. ಸದರಿ ಜಮೀನನ್ನು ನನ್ನ ಮಗನ ಹೆಸರಿನಲ್ಲಿ ಸರ್ಕಾರಿದಿಂದ ಮಂಜೂರ ಮಾಡಲಾಗಿದೆ. ಅದರ ಸರ್ವೆ ನಂಬರ್ 201/1 ಪಿ 1 ಆಗಿದೆ. ನಾನು ಮೊದಲು ಹೊರಗೆ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆಗ ಇತರ ಕುಟುಂಬಸ್ಥರು ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ನನ್ನ ಆಸ್ತಿಯನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನಮ್ಮ ಕುಟುಂಬದ ಐನ್ ಮನೆಯ ಹತ್ತಿರ ಇರುವ ಗದ್ದೆಯಲ್ಲಿ ನಮ್ಮ ತಂದೆಗೆ ಭಾಗ ಬಂದಿದೆ ಎಂದರೆ ಸರಿ. ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಬಂದ ಭಾಗದ ಆಸ್ತಿಯಲ್ಲಿ ನನ್ನ ಅಣ್ಣ 8 ನೇ ಪ್ರತಿವಾದಿ ಗದ್ದೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ . ಆದರೆ ಅವರು ಮಾರಾಟ ಮಾಡಿರುವುದು ತಪ್ಪು. ನಾನು ಸ್ವಲ್ಪ ಗದ್ದೆಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸುಳ್ಳು ಆದರೆ ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆಧಾರ ಮಾಡಿದ್ದೆ. ಸದರಿ ಗದ್ದೆಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ಸದರಿ ಗದ್ದೆಯನ್ನು ದಾವಾ ಶೆಡ್ಯೂಲ್ ನಲ್ಲಿ ತೋರಿಸಿಲ್ಲ.

ಐಟಂ ನಂಬರ್ 10 ರ ಆಸ್ತಿಯಲ್ಲಿ ನಾನು ಸುಮಾರು **1 ವರೆ** ಎಕರೆ ಸ್ವಾಧೀನದಲ್ಲಿ ಇದ್ದೇನೆ. 8 ನೇ ಪ್ರತಿವಾದಿ ಐಟಂ ನಂಬರ್ 10 ರಲ್ಲಿ 5.20 ಎಕರೆ ಆಸ್ತಿಯನ್ನು ನರೇಶ್ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ನರೇಶ್ ಎಂಬುವವರು ಮನೂಜ್ ಎಂಬುವವರಿಗೆ 1 ವರೆ ಎಕರೆಯನ್ನು ತಾವು ಖರೀದಿಸಿದ ಆಸ್ತಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 8 ನೇ

ಪ್ರತಿವಾದಿ ಮಾರಾಟ ಮಾಡಿದ ಆಸ್ತಿಯನ್ನು ಈ ದಾವೆಯಲ್ಲಿ ತೋರಿಸಿದ್ದೇನೆ. ನಾನು 8ನೇ ಪ್ರತಿವಾದಿ ಮಾರಾಟ ಮಾಡಿದ ಮತ್ತು ನಾನು ಮಾರಾಟ ಮಾಡಿದ ಆಸ್ತಿಗಳನ್ನು ಸೇರಿಸದೆ ನನಗೆ ಅನುಕೂಲವಾಗುವಂತೆ ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಎಲ್ಲಾ ಕುಟುಂಬದ ಆಸ್ತಿಗಳನ್ನು ಸೇರಿಸದೆ ದಾವಾ ಮಾಡಿದ್ದೇನೆ ಎಂದರೆ ಸರಿಯಲ್ಲ.

ಗಣಪತಿ , ನಾಗರಾಜ, ಸೋಮಶೇಖರ ಮತ್ತು ಆನಂದ್ ರವರ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರ್ವೆ ನಂಬರ್ 211/1ರ ಆಸ್ತಿಯು ಜಮ್ಮಾ ಬಾಣೆ ಆಗಿರುವುದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.
ಸಹಿ/-
(ವಿಜಯಕುಮಾರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.